RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ


| ಭಾಗ - III<br>Part - III | ಬೆಂಗಳೂರು, ಮಂಗಳವಾರ, ಏಪ್ರಿಲ್ ೧, ೨೦೧೪ (ಚೈತ್ರ ೧೧, ಶಕ ವರ್ಷ ೧೯೩೬)<br>Bangalore, Tuesday, April 1, 2014 (Chaithra 11, Shaka Varsha 1936) | ನಂ. ೨೫೩<br>No. 253 |
|---|---|---|


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಗ್ರಾಅಪ 425 ಜಿಪಅ 2013(1), ಬೆಂಗಳೂರು, ದಿನಾಂಕ: 01.04.2014

ವಿಷಯ: ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 29.03.2014ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅಧಿಸೂಚನೆ ಸಂಖ್ಯೆ: ಗ್ರಾಅಪ 139 ಸೇಶಿಕಾ 99 ದಿನಾಂಕ: 24.05.2008.
2. ಲೋಕೋಪಯೋಗಿ ಇಲಾಖೆಯ ಅನಧಿಕೃತ ಟಿಪ್ಪಣಿಗಳು ಸಂಖ್ಯೆ: ಲೋಇ 315 ಸೇಸಕಿ 2012 ದಿನಾಂಕ: 08.01.2013 ಹಾಗೂ ಲೋಇ 37 ಸೇಸಕಿ 2013 ದಿನಾಂಕ: 08.08.2013
3. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 341 ಜಿಪಅ 2012 ದಿನಾಂಕ: 07.09.2013 ಮತ್ತು ಗ್ರಾಅಪ 310 ಜಿಪಅ 2013 ದಿನಾಂಕ: 07.10.2013.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಪಿಡಬ್ಲ್ಯೂಡಿ 180 ಎಸ್‌ಎಜಿ 2008 ದಿನಾಂಕ: 23.03.2009.
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ 98 ಸೇಸಕಿ 2008 ದಿನಾಂಕ: 15.11.2010.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಡಿ ಬರುವ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲೇಖಿತ (1)ರ ದಿನಾಂಕ: 24.05.2008ರ ಅಧಿಸೂಚನೆಯಲ್ಲಿ ರಚಿಸಲಾಗಿದೆ. ಈ ನಿಯಮಗಳ ನಿಯಮ 2(2)ರ ಪ್ರಕಾರ, ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವಿವಿಧ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರು ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ಸಹ ಪಂಚಾಯತ್ ರಾಜ್ ಇಂಜಿನಿಯರಿಂಗ್

ಇಲಾಖೆಯ ಸೇವೆಯಲ್ಲಿ ವಿಲೀನಗೊಳ್ಳಲು ಆಸಕ್ತಿ ಹೊಂದಿದ್ದಲ್ಲಿ ಅಂತಹವರು ಸದರಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಹೊರಡಿಸಿದ ದಿನಾಂಕದಿಂದ ಮೂರು ತಿಂಗಳ ಕಾಲಾವಧಿಯೊಳಗಾಗಿ ಹಿಂಪಡೆಯಲಾಗದಂತಹ ಇಚ್ಛೆಯನ್ನು ವ್ಯಕ್ತಪಡಿಸಿದಲ್ಲಿ ಅಂತಹವರ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳಿಸಲು ಅವಕಾಶ ಕಲ್ಪಿಸಲಾಗಿತ್ತು. ಈ ರೀತಿ ವಿಲೀನಗೊಳ್ಳುವವರ ಅಂತರ್ ಜೇಷ್ಠತೆಯನ್ನು (*inter-se* seniority) ಅವರ ಮಾತೃ ಇಲಾಖೆಯಲ್ಲಿನ ಜೇಷ್ಠತೆಯನ್ನು ಆಧರಿಸಿ ಹಾಗೂ ಕರ್ನಾಟಕ ಸರ್ಕಾರಿ ನೌಕರರ ಜೇಷ್ಠತೆ ನಿಯಮಗಳು 1957ರ ಪ್ರಕಾರ ನಿಗದಿಪಡಿಸಲಾಗುವುದೆಂದು ತಿಳಿಸಲಾಗಿದೆ.

ಮೇಲ್ಕಂಡಂತೆ ಕಲ್ಪಿಸಲಾಗಿದ್ದ ಅವಕಾಶದನ್ವಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಾತಿ ಹೊಂದಲು ವಿವಿಧ ವೃಂದಗಳ ಅಧಿಕಾರಿ / ನೌಕರರು ಅಭಿಮತವನ್ನು ವ್ಯಕ್ತಪಡಿಸಿದ್ದರು. ಸದರಿ ವಿಲೀನಾತಿ ಹೊಂದಲು ವ್ಯಕ್ತಪಡಿಸಿದ್ದ ಅಭಿಮತಗಳನ್ನು ಅವರ ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಗೆ ಕಳುಹಿಸಿ ಸಹಮತಿ / ಅಭಿಪ್ರಾಯ ಕೋರಲಾಗಿ, ಉಲ್ಲೇಖ (2)ರ ಅನಧಿಕೃತ ಟಿಪ್ಪಣಿಗಳಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದ 10 ಅಧಿಕಾರಿಗಳ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಲು ಸಹಮತಿಯನ್ನು ನೀಡಿತ್ತು. ಅದರನುಸಾರ, ಇತರೆ ಅಧಿಕಾರಿಗಳನ್ನೊಳಗೊಂಡಂತೆ, ಸದರಿ ಹತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 16(ಎ)(ii) ರನ್ವಯ ವಿಲೀನಗೊಳಿಸಿ ಉಲ್ಲೇಖಿತ (3)ರ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಸದರಿ ವಿಲೀನಾತಿ ಆದೇಶದಲ್ಲಿ ಈಗಾಗಲೇ ನಿಯೋಜನೆ ಮೇಲೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳನ್ನು ವಿಲೀನಾತಿ ನಂತರವೂ ಅದೇ ಸ್ಥಳದಲ್ಲಿ ಮುಂದುವರೆಸಲಾಗಿದೆ ಎಂದು ಹಾಗೂ ಉಳಿದ ಅಧಿಕಾರಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿಲೀನಾತಿ ಆದೇಶವನ್ನು ಅನುಸರಿಸಿ ಕಾರ್ಯವರದಿ ಮಾಡಿಕೊಂಡ ನಂತರ ಸ್ಥಳನಿಯುಕ್ತಿ ಮಾಡಲಾಗುವುದೆಂದು ತಿಳಿಸಲಾಗಿತ್ತು. ಸದರಿ ವಿಲೀನಗೊಳಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳ ಪೈಕಿ ಶ್ರೀ ಆರ್.ವಿ.ದೇಶಪಾಂಡೆ ರವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಇದುವರೆಗೂ ಕಾರ್ಯವರದಿ ಮಾಡಿಕೊಂಡಿರುವುದಿಲ್ಲ.

ಮೇಲ್ಕಂಡಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಸೇವೆಯಲ್ಲಿ ವಿಲೀನಗೊಂಡು ಕಾರ್ಯವರದಿ ಮಾಡಿಕೊಂಡಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳ ವೃಂದದ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕಾಗಿದ್ದು, ಈ ಕುರಿತಂತೆ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪರಿಶೀಲಿಸಲಾಗಿದೆ:-

1) ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ ಸಹಾಯಕ ಇಂಜಿನಿಯರ್ ವೃಂದಗಳಲ್ಲಿ ಲೋಕೋಪಯೋಗಿ ಇಲಾಖೆಯು ಕ್ರಮವಾಗಿ ಉಲ್ಲೇಖಿತ (4) ಮತ್ತು (5)ರ ಅಧಿಸೂಚನೆಗಳಲ್ಲಿ ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಗಳಲ್ಲಿ ನಿಗದಿಪಡಿಸಿರುವ ಅಂತರ್ ಜೇಷ್ಠತೆ (*inter-se* seniority) ಅನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

2) ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿಲೀನಗೊಂಡಿರುವ ಹತ್ತು ಅಧಿಕಾರಿಗಳ ಪೈಕಿ ಮೂವರು ಅಧಿಕಾರಿಗಳು ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 32ರ ಅಡಿಯಲ್ಲಿ ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿ ಸ್ವತಂತ್ರ ಪ್ರಭಾರದಲ್ಲಿ ಇರಿಸಲಾಗಿದೆ. ಈ ಪೈಕಿ ಓರ್ವ

ಅಧಿಕಾರಿಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯವರದಿ ಮಾಡಿಕೊಂಡಿರುವುದಿಲ್ಲ. ಸದರಿ ಸ್ವತಂತ್ರ ಪ್ರಭಾರವು ಲೋಕೋಪಯೋಗಿ ಇಲಾಖೆಯಲ್ಲಿ ಮಾಡಿಕೊಂಡಿರುವ ಕಾರ್ಯವ್ಯವಸ್ಥೆಯಾಗಿರುವ ಕಾರಣ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿ ಸದರಿ ಅಧಿಕಾರಿಗಳ ಜೇಷ್ಠತೆಯನ್ನು ನಿಗದಿಪಡಿಸಲು ಮಾತ್ರ ಪರಿಗಣಿಸಲಾಗಿದೆ.

3) ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಿದ ನಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯವರದಿ ಮಾಡಿಕೊಳ್ಳದಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳನ್ನು ಸದರಿ ವೃಂದದಲ್ಲಿ ಈಗ ಜೇಷ್ಠತೆ ನಿಗದಿಪಡಿಸಲು ಪರಿಗಣಿಸಿರುವುದಿಲ್ಲ.

4) ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿ ಇನ್ನು ಮುಂದೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳ್ಳುವವರ ಜೇಷ್ಠತೆಯನ್ನು ಅವರ ಮಾತೃ ಇಲಾಖೆಯಲ್ಲಿನ ಅಂತರ್ ಜೇಷ್ಠತೆ (*inter-se* seniority) ಯನ್ನು ಆಧರಿಸಿ ಕಾಪಾಡಲಾಗುವುದು.

ಮೇಲ್ಕಂಡ ಅಂಶಗಳನ್ನು ಆಧರಿಸಿ ತಯಾರಿಸಿದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 29.03.2014ರಲ್ಲಿದ್ದಂತೆ ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧದಲ್ಲಿ ಪ್ರಕಟಿಸಲಾಗಿದೆ.

ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯಿಂದ ಬಾಧಿತರಾಗುವ ಅಧಿಕಾರಿಗಳು ಆಕ್ಷೇಪಣೆ/ ಸಲಹೆ ಏನಾದರೂ ಇದ್ದಲ್ಲಿ ಈ ಅಧಿಸೂಚನೆ ಪ್ರಕಟಿಸಿದ 15 ದಿವಸಗಳೊಳಗಾಗಿ ಸೂಕ್ತ ದಾಖಲೆಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, 3ನೇ ಮಹಡಿ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ / ಸಲಹೆ ಬಾರದಿದ್ದಲ್ಲಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮವಹಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಸಿದ್ದೇಶ್ ಪೋತಲಕಟ್ಟೆ**
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು–ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಅಧಿಸೂಚನೆ ಸಂಖ್ಯೆ ಗ್ರಾಅಪ 425 ಜಿಪಅ 2013 (1) ದಿನಾಂಕ 01.04.2014ಕ್ಕೆ ಅನುಬಂಧ

ದಿನಾಂಕ 29-03-2014ರಲ್ಲಿದ್ದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಗ್ರೂಪ್-ಎ) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ

| ಕ್ರ. ಸಂ. | ಲೋ.ಇ.ಯು ಪ್ರಕಟಿಸಿರುವ ಸ.ಕಾ.ಇಂ. (ವಿಭಾಗ-1) / ಸ.ಇಂ. ವೃಂದದ ಅಂತಿಮ ಜೇಷ್ಠತಾ ಪಟ್ಟಿ ಯಲ್ಲಿನ ಅಂತರ್ ಜೇಷ್ಠತಾ ಕ್ರ.ಸಂ. | ಹೆಸರು ಶ್ರೀಯುತರು | ಹುಟ್ಟಿದ ದಿನಾಂಕ | ಸ.ಕಾ.ಇಂ. ವೃಂದಕ್ಕೆ ಪದೋನ್ನತಿ ಹೊಂದಿದ ದಿನಾಂಕ | ಸ.ಕಾ.ಇಂ. ವೃಂದಕ್ಕೆ ಪದೋನ್ನತಿ ಹೊಂದಲು ಅರ್ಹತಾ ದಿನಾಂಕ | ಷರಾ |
|---|---|---|---|---|---|---|
| 1. | 3138 | ಕೆ.ಎಂ.ನಾಗರಾಜ್ | 01-08-1955 | 02-05-2002 | 05-07-2002 | |
| | 3235 | ಆರ್.ವಿ.ದೇಶಪಾಂಡೆ | 30-08-1955 | 05-10-2002 | 05-10-2002 | ಇವರನ್ನು ಸರ್ಕಾರಿ ಆದೇಶ ಸಂ: ಗ್ರಾಅಪ 310 ಜಿಪಅ 2013 ದಿ: 7.10.2013 ರಲ್ಲಿ ಪಂ.ರಾ.ಇಂ.ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ. ಆದರೆ ಇವರು ಗ್ರಾಅಪ ಇಲಾಖೆ ಯಲ್ಲಿ ಕಾರ್ಯವರದಿ ಮಾಡಿಕೊಳ್ಳದಿರುವುದರಿಂದ ಇವರ ಹೆಸರನ್ನು ಪಂ.ರಾಜ್ ಇಂ.ಇಲಾಖೆಯ ಜೇಷ್ಠತೆಯಲ್ಲಿ ಪರಿಗಣಿಸಿರುವುದಿಲ್ಲ. |
| 2. | 3283 | ಎಸ್.ಉಮೇಶ್ | 28-05-1954 | 05-10-2002 | 05-10-2002 | |
| 3. | 3288 | ಕೆ.ಸಿದ್ಧನಗೌಡ | 01-06-1954 | 05-10-2002 | 05-10-2002 | |
| 4. | 3435 | ಎಸ್.ಎ.ಪಾಟೀಲ್ | 20-03-1957 | 21-04-2003 | 21-04-2003 | |
| 5. | 3654 | ಎಂ.ನಾಗರಾಜ್ | 20-05-1954 | 20-02-2004 | 20-02-2004 | |
| 6. | ಸ. ಇಂ. ಜೇ.ಕ್ರ..ಸಂ. 550 | ಟಿ.ಎಸ್.ಲೋಕೇಶ್ | 15-02-1959 | 09-09-2005 | 09-09-2005 | ಲೋಕೋಪಯೋಗಿ ಇಲಾಖೆಯು ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1)ರ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 23.3.2009 ರಲ್ಲಿ ಪ್ರಕಟಿಸಿದೆ. ಆ ನಂತರ ಮುಂದುವರೆದ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಮಾನ್ಯ ನ್ಯಾಯಾಲಯದ ತಡೆಯಾಜ್ಞೆ ಇರುವ ಕಾರಣ ಪ್ರಕಟಿಸಿರುವುದಿಲ್ಲ. ಆದುದರಿಂದ ಕ್ರಮ: 6 ರಿಂದ 9ರ ಈ 4 ಅಧಿಕಾರಿಗಳಿಗೆ ಸಂಬಂಧಿಸಿದಂತೆ ಲೋ.ಇ.ಯು ಪ್ರಕಟಿಸಿರುವ ಸ.ಇಂ. ವೃಂದದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಅಂತರ್ ಜೇಷ್ಠತೆಯನ್ನು ಪರಗಣನೆಗೆ ತೆಗೆದುಕೊಳ್ಳಲಾಗಿದೆ. |
| 7. | ಸ. ಇಂ. ಜೇ.ಕ್ರ..ಸಂ. 616 | ಎಂ.ಜಿ.ಕುಲಕರ್ಣಿ | 20-06-1956 | 09-09-2005 | 09-09-2005 | |
| 8. | ಸ. ಇಂ. ಜೇ.ಕ್ರ..ಸಂ.701 | ಎ.ಮಂಜುನಾಥ್ | 22-12-1958 | 09-09-2005 | 09-09-2005 | |
| 9. | ಸ. ಇಂ. ಜೇ.ಕ್ರ.ಸಂ. 1113 | ಚಂದ್ರಶೇಖರ್ ಎನ್. ಸುಲೇಪೇಟಕರ್ | 17-08-1957 | 24-08-2007 | 24-08-2007 | |

**ಸಿದ್ದೇಶ್ ಪೋತಲಕಟ್ಟಿ**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) (200 ಪ್ರತಿಗಳು)